ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.
**ಸಿ.ಸಿ. ಸಂಖ್ಯೆ 144/2018**

| | | |
|---|---|---|
| ಹೆಸರುಃ | ಮಹಮದ್ ತಬ್ರೀಜ್ | **ಪಿಡಬ್ಲ್ಯೂ -01** ಸಿಡಬ್ಲ್ಯೂ **-01** |
| ತಂದೆಃ | ಮಹಮದ್ ಯಾಕೂಬ್ | ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾದ ದಿನಾಂಕಃ **18.06.2019** |
| ವಯಸ್ಸುಃ | **34** ವರ್ಷ | |
| ಕೆಲಸಃ | ಫರ್ನಿಚರ್ ಕೆಲಸ | |
| ವಾಸಸ್ಥಳಃ | ಹುಣಸೂರು. | |

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ ಆರೋಪಿ ಗೊತ್ತು. ಚಾಸಾ 5 ರವರು ಗೊತ್ತು. ದಿಃ **25.02.2013** ರಂದು ಫೇಸ್ ಬುಕ್ಕಿನಲ್ಲಿ ಆರೋಪಿಯು ಮುಸ್ಲಿಮರು ನಮಾಜ್ ಮಾಡುವಾಗ ನಿಂತಿರುವಂತೆ ಅದರ ಮೇಲೆ ಹಂದಿಯ ಭಾವಚಿತ್ರ, ರುಕುಂ (ನಮಾಜ್) ಮಾಡುವಾಗ ಹಿಂಬದಿಯಲ್ಲಿ ಅಸಹ್ಯವಾಗಿ ಹಂದಿಯ ಚಿತ್ರ ಇರುವಂತೆ ಸುಮಾರು **7-8** ಫೋಟೋಗಳನ್ನು ಹಾಕಿದ್ದರು. ಅದನ್ನು ನಾನು ನೋಡಿರುತ್ತೇನೆ. ಅದನ್ನು ನೋಡಿ ನನಗೆ ಬೇರೆಯವರ ದೇವರಿಗೆ ಮರ್ಯಾದೆ ಕೊಡಬೇಕು, ಆರೋಪಿ ಪೂಜಾರಿಯ ಮಗನಾಗಿದ್ದರೂ ಸಹ ಈ ರೀತಿ ಮಾಡಿದ್ದಾರೆಂದು ಬೇಜಾರಾಗಿರುತ್ತದೆ. ಸದರಿ ಫೋಟೋಗಳು ರೂಬುಲ್ಲಾ ರವರ ಮೊಬೈಲಿನ ಚಿಪ್ಪಿನಲ್ಲಿದ್ದು, ವಿಚಾರವಾಗಿ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರು ಮತ್ತು ತನ್ನ ಸಹಿಯನ್ನು ಗುರುತಿಸಿರುತ್ತಾರೆ. ದೂರನ್ನು ನಿಪಿ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿ **1**(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಎ ಪಿ ಪಿ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.